ಇತ್ತೀಚಿನ ಸವಲತ್ತು 31.3.1998ರಲ್ಲಿ ಕೊನೆಗೊಂಡಿರುತ್ತದೆ.

ಶ್ರೀ ಕೆ.ಎಸ್. ಕಿರಣ್‌ಕುಮಾರ್: ಸಭಾಧ್ಯಕ್ಷರೇ, ಈ ಉತ್ತರದಲ್ಲಿ ಮಂತ್ರಿಗಳು ಕೇವಲ 37 ಉದ್ದಿಮೆಗಳು ಈ ರೀತಿ ಉಳಿದಿವೆ ಎಂದು ಹೇಳಿದ್ದಾರೆ. ಒ.ವೈ.ಒ.ಎಸ್.ಎಸ್. ಸ್ಕೀಮನ್ನು 31–3–98ಕ್ಕೆ ಎಕ್ಸ್‌ಪೈರ್ ಆಗಿದೆ, ಅಲ್ಲಿಗೆ ನಿಲ್ಲಿಸಿದ್ದೇವೆಂದು ಹೇಳುತ್ತಿದ್ದಾರೆ. ಹಿಂದಿನ ಪ್ರಶ್ನೆಗೆ ಉತ್ತರ ಕೊಟ್ಟ ಸಮಯದಲ್ಲಿ ಅವರು ಈ ಕೈಗಾರಿಕೆಗಳು ನಷ್ಟದಲ್ಲಿವೆ ಮುಚ್ಚಿಹೋಗತಕ್ಕ ಸ್ಥಿತಿಯಲ್ಲಿವೆ ಎಂದು ಉತ್ತರ ಕೊಟ್ಟಿರುವುದರಿಂದ ಈ ಒ.ವೈ.ಒ.ಎಸ್.ಎಸ್. ಸ್ಕೀಮ್ ಏನಿದೆ ಅದನ್ನು ಮತ್ತೆ ಮುಂದುವರಿಸಿ, ಹಿಂದೆ 20 ವರ್ಷಗಳಿಂದ ಕಟ್ಟುವುದಕ್ಕೆ ಏನು ಖರ್ಚು ತಗಲಿತ್ತು, ಅಷ್ಟು ಹಣವನ್ನು ತೆಗೆದುಕೊಂಡು ಅವರಿಗೆ ಸ್ವಂತಕ್ಕೆ ಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಈ ಸದನದ ಮೂಲಕ ಮತ್ತು ಗೌರವಾನ್ವಿತ ಸದಸ್ಯರ ಮೂಲಕ ನಾನು ಈ 37 ಜನ ಕೈಗಾರಿಕೋದ್ಯಮಿಗಳಿಗೆ ಭರವಸೆಯನ್ನು ಕೊಡುತ್ತೇನೆ. ಇವರು ತಮ್ಮ ಸ್ವಂತದ್ದನ್ನಾಗಿ ಅಂದರೆ ಲೀಸ್ ಬೇಸಿಸ್ ಮೇಲೆ ತೆಗೆದುಕೊಳ್ಳಬೇಕು ಎಂದು ಇಚ್ಛೆಪಟ್ಟಲ್ಲಿ ಈ ಒ.ವೈ.ಒ.ಎಸ್.ಎಸ್. ಸ್ಕೀಮ್ ಏನಿದೆ ಅದನ್ನು ಮತ್ತೆ 5–6 ತಿಂಗಳುಗಳು ಕಾಲ ಆಪರೇಟ್ ಮಾಡುವುದಕ್ಕೆ, ಮುಂದುವರಿಸುವುದಕ್ಕೆ ವ್ಯವಸ್ಥೆ ಮಾಡಲಾಗುವುದೆಂಬ ಭರವಸೆಯನ್ನು ಕೊಡುತ್ತೇನೆ.

ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳು

116 (1696) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳೇನು ;

ಆ) ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ರಾಜ್ಯದಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳೆಷ್ಟು ;

ಈ) ಇವುಗಳಲ್ಲಿ ಪೈಕಿ ಕಳೆದ 3 ವರ್ಷಗಳಿಂದ ಮುಚ್ಚಿರುವ ಕೈಗಾರಿಕೆಗಳೆಷ್ಟು ;

ಉ) ಕೈಗಾರಿಕೆಗಳನ್ನು ಮುಚ್ಚಲು ಕಾರಣಗಳೇನು (ಜಿಲ್ಲಾವಾರು ವಿವರ ನೀಡುವುದು) ;

ಊ) ಓ.ಟಿ.ಎಸ್. ಯೋಜನೆಯಡಿ ಎಷ್ಟು ಅರ್ಜಿಗಳು ಯಾವಾಗ ಬಂದಿವೆ ; ಎಷ್ಟು ಕೈಗಾರಿಕೆಗಳಿಗೆ ಪರಿಹಾರ ನೀಡಲಾಗಿದೆ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳು ಈ ಕೆಳಕಂಡಂತಿವೆ:

1. ಉದಾರೀಕರಣ
2. ಜಾಗತೀಕರಣ
3. ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ
4. ಬೃಹತ್, ಮಧ್ಯಮ ಮತ್ತು ಸಾರ್ವಜನಿಕ ಉದ್ದಿಮೆಗಳಿಂದ ವಿಳಂಬ ಪಾವತಿ

5. ವಿದ್ಯುತ್ ಸಮಸ್ಯೆ
6. ದುಡಿಮೆ ಬಂಡವಾಳದ ಸಮಸ್ಯೆ
7. ಮಾರುಕಟ್ಟೆ ಸಮಸ್ಯೆ
8. ಆಡಳಿತಾತ್ಮಕ ವಿವಾದಗಳು

ಆ) ಜಾಗತೀಕರಣ ಹಾಗೂ ಉದಾರೀಕರಣ ನೀತಿಗಳಿಂದಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಕ್ಷೇತ್ರದಲ್ಲಿ ತೀವ್ರತರವಾದ ಪೈಪೋಟಿ ಉಂಟಾಗಿದ್ದು ಈ ಹಿನ್ನೆಲೆಯಲ್ಲಿ ಕೈಗಾರಿಕೆಗಳನ್ನು ನಿಯಂತ್ರಣಗಳಿಂದ ಮುಕ್ತ ಹಾಗೂ ಸರಳಗೊಳಿಸುವುದು ಅತಿ ಅವಶ್ಯಕವಾಗಿರುವುದರಿಂದ ಸರ್ಕಾರವು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002 (Industrial Facilitation Act)ನ್ನು ಪ್ರಕಟಿಸಿದೆ. ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ (1) ಸಂಯೋಜಿತ ಅರ್ಜಿ ಸಲ್ಲಿಸಲು ಅವಕಾಶ (2) ಸ್ವಯಂ ಘೋಷಿತ ಪ್ರಮಾಣ ಪತ್ರ ಸಲ್ಲಿಸಲು ಅವಕಾಶ (3) ಪರಿಭಾವಿತ ಅನುಮೋದನೆ ಇವುಗಳಿಂದಾಗಿ ಪ್ರವರ್ತಕರಿಗೆ ಒಂದೇ ಸ್ಥಳದಲ್ಲಿ ಮಾರ್ಗದರ್ಶನ ಹಾಗೂ ನೆರವನ್ನು ಒದಗಿಸುವ ಮೂಲಕ ರಾಜ್ಯದಲ್ಲಿ ಕೈಗಾರಿಕೆ ಮತ್ತು ಇತರೆ ಯೋಜನೆಗಳ ತ್ವರಿತ ಅನುಷ್ಠಾನಗೊಳಿಸುವುದು ಇದರ ಮೂಲೋದ್ದೇಶವಾಗಿದೆ. ಸಣ್ಣ ಕೈಗಾರಿಕೆಗಳ ಹಾಗೂ ಅಲ್ಲಿನ ಕಾರ್ಮಿಕರ ಹಿತ ರಕ್ಷಣೆಗಾಗಿ ಕೈಗಾರಿಕಾ ನೀತಿ 2001–06ರಂತೆ ಅನೇಕ ರಿಯಾಯ್ತಿ ಸೌಲಭ್ಯಗಳನ್ನು ನೀಡಲಾಗಿದೆ ಹಾಗೂ ಕೈಗಾರಿಕೆಗಳ ಬೆಳವಣಿಗೆಗಾಗಿ ಕೆಳಕಂಡ ಅಂಶಗಳ ಬಗ್ಗೆ ಒತ್ತು ನೀಡಲಾಗಿದೆ.

1. 2004–05ನೇ ಸಾಲಿನಲ್ಲಿ ಇದುವರೆಗು ಒಟ್ಟು 6562 ಘಟಕಗಳಿಗೆ ರೂ. 77.59 ಕೋಟಿ ಸಹಾಯಧನ ಬಿಡುಗಡೆ ಮಾಡಲಾಗಿದೆ.
2. ಸರ್ಕಾರಕ್ಕೆ ಕೈಗಾರಿಕಾ ನೀತಿಯ ಬಗ್ಗೆ ಹಾಗೂ ಬೆಳವಣಿಗೆಗೆ ಸಲಹೆಗಳನ್ನು ನೀಡಲು ಅನುವಾಗುವಂತೆ ಮೊದಲ ಬಾರಿಗೆ ಸಣ್ಣ ಕೈಗಾರಿಕಾ ಸಲಹಾ ಸಮಿತಿಯನ್ನು ರಚಿಸಲಾಗಿದೆ.
3. ಡಾ: ನಂಜುಂಡಪ್ಪ ಕಮಿಟಿ ಶಿಫಾರಸ್ಸಿನಂತೆ ಹೆಚ್ಚು ಮತ್ತು ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ಕ್ರಿಯಾ ಯೋಜನೆಯನ್ನು ತಯಾರಿಸಿದ್ದು ಒಟ್ಟು ರೂ. 769.48 ಕೋಟಿ ಐದು ವರ್ಷದ ಅವಧಿಯಲ್ಲಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
4. ಸಮೂಹ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಕೇಂದ್ರ ಸರ್ಕಾರದ ಕೈಗಾರಿಕಾ ಮೂಲಭೂತ ಸೌಲಭ್ಯ ಉನ್ನತೀಕರಣ ಯೋಜನೆಯಡಿಯಲ್ಲಿ ಈಗಾಗಲೇ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು, ಈ ಕೆಳಕಂಡ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರಕಿರುತ್ತದೆ.:
   i) ಬೆಳಗಾಂ ಫೌಂಡರಿ ಕ್ಲಸ್ಟರ್, ಬೆಳಗಾಂ.
   ii) ಮಷಿನ್ ಟೂಲ್ ಕ್ಲಸ್ಟರ್, ಬೆಂಗಳೂರು.

   ಹುಬ್ಬಳ್ಳಿಯಲ್ಲಿ ಇಂಡಸ್ಟ್ರಿಯಲ್ ವಾಲ್ವ್ ಕ್ಲಸ್ಟರ್, ಬಳ್ಳಾರಿಯಲ್ಲಿ ಸಿದ್ದ ಉಡುಪು

ಕ್ಲಸ್ಟರ್ ಹಾಗೂ ಚನ್ನಪಟ್ಟಣ ಮತ್ತು ಹಾಸನದಲ್ಲಿ ಕಾಯಿರ್ ಕ್ಲಸ್ಟರ್ ಅಭಿವೃದ್ಧಿ ಪಡಿಸುವ ಬಗ್ಗೆ ಈಗಾಗಲೇ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

5. ಸಣ್ಣ ಕೈಗಾರಿಕೆಗಳಿಗೆ ಬ್ಯಾಂಕುಗಳಿಂದ ಹೆಚ್ಚಿನ ಸಾಲ ಸೌಲಭ್ಯ ಸಮಯಕ್ಕೆ ಸರಿಯಾಗಿ ಒದಗಿಸಲು ನೆರವಾಗುವಂತೆ ಕ್ರಮ ಕೈಗೊಳ್ಳಲು ಬ್ಯಾಂಕರುಗಳೊಂದಿಗೆ ಚರ್ಚಿಸಲಾಗಿ ಆದ್ಯತೆ ಮೇರೆಗೆ ನೀಡುವ ಸಾಲುಗಳಲ್ಲಿ ಶೇ. 15 ರಷ್ಟು ಸಣ್ಣ ಕೈಗಾರಿಕೆಗಳಿಗೆ ಮೀಸಲಿಡಲು ರಿಸರ್ವ ಬ್ಯಾಂಕ್ ಆಫ್ ಇಂಡಿಯಾ ಕೋರಲಾಗಿದೆ.

6. ಸಣ್ಣ ಕೈಗಾರಿಕಾ ಉದ್ದೆಮೆದಾರರನ್ನು ಪ್ರೋತ್ಸಾಹಿಸಲು ಸಣ್ಣ ಕೈಗಾರಿಕೆಗಳಿಗೆ ರಫ್ತು ಪ್ರಶಸ್ತಿ ಹಾಗೂ ಉತ್ತಮ ಕೈಗಾರಿಕಾ ಉದ್ದಿಮೆದಾರ ಪ್ರಶಸ್ತಿಯನ್ನು ನೀಡಲು ತೀರ್ಮಾನಿಸಲಾಗಿದೆ.

ಇ) ರಾಜ್ಯದಲ್ಲಿ ದಿ: 31.12.2004ರ ಅಂತ್ಯಕ್ಕೆ 3,16,870 ಘಟಕಗಳು ಇರುತ್ತವೆ.

ಈ) 2001–02ನೇ ಸಾಲಿನ 3ನೇ ಅಖಿಲ ಭಾರತ ಸಣ್ಣ ಪ್ರಮಾಣ ಕೈಗಾರಿಕೆಗಳ ಗಣತಿಯ ಪ್ರಾಥಮಿಕ ವರದಿಯ ಪ್ರಕಾರ ರಾಜ್ಯದಲ್ಲಿ ಶೇ. 37.65ರಷ್ಟು ಘಟಕಗಳು ಮುಚ್ಚಿರುತ್ತವೆ.

ಉ) ಕೈಗಾರಿಕೆಗಳು ಮುಚ್ಚಲು ಪ್ರಮುಖ ಕಾರಣಗಳು ಈ ಕೆಳಕಂಡಂತಿವೆ:

1. ಸೂಕ್ತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳದೆ ಇರುವುದು.
2. ತಂತ್ರಜ್ಞಾನ ಬಯಸುವವರ ಮತ್ತು ತಂತ್ರಜ್ಞಾನ ಅಭಿವೃದ್ಧಿಪಡಿಸುವವರ ಮಧ್ಯೆ ಇರುವ ಸಂಪರ್ಕದ ಕೊರತೆ.
3. ಮಾರುಕಟ್ಟೆ ಸೌಲಭ್ಯ ಕೊರತೆ
4. ಬೃಹತ್ ಮತ್ತು ಮಧ್ಯಮ ಹಾಗೂ ಸಾರ್ವಜನಿಕ ಉದ್ದಿಮೆಗಳಿಂದ ವಿಳಂಬ ಪಾವತಿ.
5. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಸಮಸ್ಯೆ.
6. ಸೂಕ್ತ ಸಮಯಕ್ಕೆ ಹಾಗೂ ಅವಶ್ಯಕತೆಗೆ ತಕ್ಕಂತೆ ಒದಗದ ಸಾಲ ಸೌಲಭ್ಯ.
7. ಕಡಿಮೆ ದರದಲ್ಲಿ ಮೂಲಭೂತ ಸೌಲಭ್ಯ ಕೊರತೆ.

ಊ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು 1.4.1993ರಿಂದ 31.3.2004ರ ಅಂತ್ಯದವರೆಗಿನ ಅವಧಿಯಲ್ಲಿ ಓ.ಟಿ.ಎಸ್. ಯೋಜನೆಯಡಿ 17,891 ಅರ್ಜಿಗಳನ್ನು ಸ್ವೀಕರಿಸಿದೆ. ಇದರಲ್ಲಿ ಸಂಸ್ಥೆಯು 17,414 ಘಟಕಗಳಿಗೆ ಓ.ಟಿ.ಎಸ್. ಸೌಲಭ್ಯ ಮಂಜೂರು ಮಾಡಿದೆ. ಈ ಘಟಕಗಳಿಗೆ 22.19 ಕೋಟಿ ರೂ.ಗಳ ಅಸಲು ಮನ್ನಾ ಹಾಗೂ 275.25 ಕೋಟಿ ರೂ.ಗಳ ಬಡ್ಡಿ ಮನ್ನಾ ಸೌಲಭ್ಯಗಳನ್ನು ಸಂಸ್ಥೆಯು ಕಲ್ಪಿಸಿದೆ.

ಶ್ರೀ ಎಸ್. ಯೋಗೀಶ್ ಭಟ್: ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಂದಿರುವಂಥ 40 ಪ್ರತಿಶತ ಕೈಗಾರಿಕೆಗಳು ಬಂದ್ ಆಗಿವೆ. ಲಕ್ಷಾಂತರ ಕಾರ್ಮಿಕರು ಇವತ್ತು ನಿರ್ಗತಿಕರಾಗುವ ಸ್ಥಿತಿ ಬಂದಿದೆ. ಈ ನಿಟ್ಟಿನಲ್ಲಿ ವಿಶೇಷವಾಗಿ ಸಣ್ಣ ಕೈಗಾರಿಕೆಗಳಿಗೆ ಶಕ್ತಿಯನ್ನು ಕೊಡುವಂಥ ಕಾರ್ಯವನ್ನು ತಮ್ಮ ಮೂಲಕ ನಾನು ಅಪೇಕ್ಷೆ ಮಾಡುತ್ತಿದ್ದೇನೆ. ಈ ಯೋಜನೆಗೋಸ್ಕರ ಇಡೀ ರಾಜ್ಯಕ್ಕೆ

ಸಂಬಂಧಪಟ್ಟಂತೆ ಹೇಳದಿದ್ದರೂ ಕೂಡ ವಿಶೇಷವಾಗಿ ಬೈಕಂಪಾಡಿಯಲ್ಲಿ, ತಾವು ಬಂದು ವೀಕ್ಷಣೆ ಮಾಡಿದ್ದೀರಿ; ಪರಿಶೀಲನೆ ಮಾಡಿದ್ದೀರಿ. ಅಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಎಷ್ಟಿದೆಯೆಂದರೆ, ರಸ್ತೆ ಕೂಡ ಇಲ್ಲ, ದಾರಿದೀಪಗಳು ಇಲ್ಲ. ನೀರಿನ ಸೌಲಭ್ಯ ಇಲ್ಲ. ಬಹುಶಃ ಬೆಂಗಳೂರಿನ ಪೀಣ್ಯ ಇಂಡಸ್ಟ್ರಿಯಲ್ ಏರಿಯಾವನ್ನು ಮೀರಿಸುವಂಥ ನಿಟ್ಟಿನಲ್ಲಿ, ಅಷ್ಟು ವಿಶಾಲವಾಗಿರುವಂಥ, ಅಷ್ಟು ಪೊಟೆನ್‌ಷಿಯಲಲ್ ಇರುವಂಥ ಏರಿಯಾ ಇದೆ. ಅದಕ್ಕೆ ಬೇಕಾಗುವಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕನಿಷ್ಟ ನಾಲ್ಕುವರೆ ಕೋಟಿ ಯೋಜನೆಯನ್ನು ಮಾಡಬೇಕೆಂದು ಈಗಾಗಲೇ ಇಂಡಸ್ಟ್ರಿಯಲ್ ಅಸೋಷಿಯೇಷನ್ ಕಡೆಯಿಂದ ಮನವಿಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಿಂದ ಯಾವುದೇ ಯೋಜನೆಯನ್ನು ನಮ್ಮ ಭಾಗದಲ್ಲಿ ತರುವುದಕ್ಕೆ ಸಾಧ್ಯವಿದ್ದರೆ, ಅಲ್ಲಿಯ ಜನರ ಕಾಂಟ್ರಿಬ್ಯೂಷನ್ ಕೂಡ ಅಳವಡಿಸಿ ಆ ಯೋಜನೆಗಳನ್ನು ಅನುಷ್ಟಾನಕ್ಕೆ ತರುವ ಮೂಲಕ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಅದನ್ನ ಶಕ್ತಿಗೊಳಿಸಬಹುದೇ ಎನ್ನುವ ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಈ ಬೈಕಂಪಾಡಿ ಏರಿಯಾಕ್ಕೆ ನಾನು ಕಳೆದ ತಿಂಗಳು ಮಂಗಳೂರಿಗೆ ಭೇಟಿ ಮಾಡಿದಂಥ ಸಂದರ್ಭದಲ್ಲಿ, ಗೌರವಾನ್ವಿತ ಸದಸ್ಯರ ಸಲಹೆ ಮೇರೆಗೆ ಭೇಟಿಯನ್ನು ಕೊಟ್ಟು, ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ನಾನು ಗಮನಿಸಿದ್ದೆನೆ. ಕೆಲವು ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕಂಥ ಅವಶ್ಯಕತೆಯನ್ನು ನಾನು ಮನಗಂಡಿದ್ದೇನೆ. ಮತ್ತು ನಾನು ಈ ರೀತಿ ಮಾಡಬೇಕೆಂದಿದ್ದೆನೆಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೂಡ ಕೊಟ್ಟಿದ್ದೇನೆ. ನಾನು ವಾಪಸ್ ಬಂದಮೇಲೆ, ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇನೆ. ರಾಜ್ಯದಲ್ಲಿ ಕೆ.ಎಸ್.ಐ.ಎ.ಡಿ.ಸಿ. ಷೇರ್ ಕ್ಯಾಪಿಟಲ್ ಇಂಡಸ್ಟ್ರಿಯಲ್ ಎಸ್ಟೇಟ್‌ಗಳೇನಿವೆ, ಕೆ.ಎ.ಐ.ಡಿ.ನಲ್ಲಿರತಕ್ಕ ಇಂಡಸ್ಟ್ರಿಯಲ್ ಎಸ್ಟೇಟ್‌ಗಳೇನಿವೆ, ಅಲ್ಲಿ ಎಲ್ಲಿ ರಸ್ತೆಗಳನ್ನು ರಿಪೇರಿ ಮಾಡಿಸಬೇಕು, ಎಲ್ಲಿ ಕುಡಿಯುವ ನೀರನ್ನು ಒದಗಿಸಬೇಕು, ಎಲ್ಲಿ ಬೀದಿ ದೀಪ ಸರಿಯಿಲ್ಲ ಮತ್ತು ಹಳ್ಳಿ ಕಡೆ ಡೈರೆಕ್ಟ್ ಲೈನ್ ಹಾಕುವುದರಿಂದ ಸಿಸ್ಟಂ ಇಂಪ್ರೂವ್‌ಮೆಂಟ್, ಪವರ್ ಸಪ್ಲೈನಲ್ಲಿ ಕ್ವಾಲಿಟಿ ಪವರ್ ಸಪ್ಲೈ ಮಾಡಲಿಕ್ಕೆ ಅನುಕೂಲವಾಗುತ್ತೆ ಎನ್ನುವ ವಿಚಾರದಲ್ಲಿ ನಾನು ಕ್ರಮ ತೆಗೆದುಕೊಂಡಿದ್ದೇನೆ. ಆದರೆ, ವಿಶೇಷವಾಗಿ ಮಾನ್ಯ ಯೋಗೀಶ್ ಭಟ್ಟರು ಹೇಳಿರುವುದಕ್ಕೆ ನನಗೆ ಬಹಳ ಸಂತೋಷವಾಯಿತು. ಶ್ರೀಮಾನ್ ನಾಗರಾಜ ಶೆಟ್ಟರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಸಲಹೆಗಳ ಆಧಾರದ ಮೇಲೆಯೇ ನಾನು ಕೆಲವು ಕ್ರಮಗಳನ್ನೂ ಸಹಿತ ತೆಗೆದುಕೊಂಡಿದ್ದೇನೆ. ನಮ್ಮ ಶಾಸಕರೊಬ್ಬರು ಹೊಸದಾಗಿ ಗೆದ್ದುಬಂದಿರತಕ್ಕವರು ಸಣ್ಣ ಕೈಗಾರಿಕೆಗಳಿಂದ 10–15 ವರ್ಷ ಅನುಭವ ಇರತಕ್ಕಂಥ ನಾಯಕರುಗಳಿಗೆ ಇರತಕ್ಕ ಅನುಭವವನ್ನು ನನ್ನ ಜೊತೆಯಲ್ಲಿ ಹೇಳಿದರು. ನನಗೆ ಬಹಳ ಸಂತೋಷವಾಯಿತು. ಈ ಸಂದರ್ಭದಲ್ಲಿ ನಾನು ಅದನ್ನು ಉದ್ದೇಶಪೂರ್ವಕವಾಗಿಯೇ ಪ್ರಸ್ತಾಪ ಮಾಡುತ್ತಿದ್ದೇನೆ. ಬೈಕಂಪಾಡಿ ಏರಿಯಾಕ್ಕೆ, ಪೀಣ್ಯ ಇಂಡಸ್ಟ್ರಿಯಲ್ ಏರಿಯಾ ಅಸೋಸಿಯೇಷನ್‌ನವರು ಸೇರಿ ಸ್ವಲ್ಪ ಹಣ ಕೊಟ್ಟರು. ಆ ಹಣದ ಆಧಾರದ ಮೇಲೆ ನಾವು ಕೇಂದ್ರ ಸರ್ಕಾರಕ್ಕೆ ಅಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಒಂದು ಯೋಜನೆಯನ್ನು ಕಳುಹಿಸಿದ್ದೆವು. ಮಾನ್ಯ ಯೋಗೀಶ್ ಭಟ್‌ರವರ ಸಲಹೆ ಮೇರೆಗೆ, ಅಲ್ಲಿಯ ಇಂಡಸ್ಟ್ರಿಯಲ್ ಎಸ್ಟೇಟ್‌ನವರು ನನಗೊಂದು ಪತ್ರವನ್ನು ಕೊಟ್ಟಿದ್ದಾರೆ.

ಅದರ ಆಧಾರದ ಮೇಲೆ ನಾವು ಕೇಂದ್ರ ಸರ್ಕಾರಕ್ಕೂ ಸಹಿತ ಅದನ್ನು ಇಂಪ್ರೂವ್‌ಮೆಂಟ್ ಮಾಡಲಿಕ್ಕೆ ಕಳುಹಿಸುತ್ತೇನೆ. ಮತ್ತೆ ಅಲ್ಲೊಂದು ರೋಡನ್ನು ಕೂಡಲೇ ಮಳೆಗಾಲದೊಳಗಡೆ ಇಂಪ್ರೂವ್‌ಮೆಂಟ್ ಮಾಡಬೇಕಾಗಿದೆ. ಬಹುಶಃ ಫಿಶ್ ಎಕ್ಸ್‌ಪೋರ್ಟ್ ಮಾಡತಕ್ಕ ಪ್ರಾಜೆಕ್ಟ್ ಇರಬೇಕೆಂದು ಕಾಣುತ್ತದೆ. ಆ ರಸ್ತೆಯನ್ನು ರಿಪೇರಿ ಮಾಡಿಸಲಿಕ್ಕೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಅಲ್ಲಿ ವಿಶೇಷವಾಗಿ ಬಂದಿರುವಂಥಾದ್ದು, ರಾಜ್ಯದಲ್ಲಿ ರಫ್ತು ಆಗುವಂಥ ಪ್ರದೇಶಗಳಲ್ಲಿ, ಅದರ ಮೇಲಿರತಕ್ಕ ಅಡಿಷನಲ್ ಸೆಸ್ ಎಂದು ಕೇಂದ್ರ ಸರ್ಕಾರ ಸಂಗ್ರಹ ಮಾಡುತ್ತೆ. ಅಸೈಡ್ ಸ್ಕೀಮ್ ಮೂಲಕ ಸಹಾಯಧನ ಕೊಡುತ್ತದೆ. ಅಂತಹ ಸಂದರ್ಭದಲ್ಲಿ ಬಂದರು ಮಂಡಳಿಯಿಂದ ಅದನ್ನು ಕೊಡುತ್ತಿದ್ದಾರೆ. ಅದನ್ನು ಕೆ.ಎಸ್.ಐ.ಡಿ.ಸಿ. ಮೂಲಕ ಬರುವುದಕ್ಕೆ ಸಾಧ್ಯವಾದರೆ, ಅದರ ಮೂಲಕ ನೇರವಾಗಿ ನಮ್ಮ ಇಂಡಸ್ಟ್ರಿಯಲ್ ಏರಿಯಾಕ್ಕೆ ಉಪಯೋಗ ಮಾಡಲು ಸಾಧ್ಯವಾಗುತ್ತೆ. ವಿಶೇಷವಾಗಿ ಹದಿನೇಳುವರೆ ಕೋಟಿ ನಮಗೆ ನೇರವಾಗಿ ಬಂದಿರುವಂಥ ಹಣವನ್ನೂ ಕೂಡ ಕೆ.ಎಸ್.ಎಸ್.ಐ.ಡಿ.ಸಿ.ಯಿಂದ ಅಸೈಡ್ಸ್ ಸ್ಕೀಮ್‌ನಿಂದ ನಮಗೆ ಬಂದಿರುವಂಥಾದ್ದು ಉಪಯೋಗ ಮಾಡುವುದಕ್ಕೆ ಬಿಟ್ಟಿಲ್ಲ. ಆದ್ದರಿಂದ, ತಮ್ಮ ಮೂಲಕ ವಿನಂತಿ ಮಾಡುತ್ತಿರುವಂತಾದ್ದು, ನೇರವಾಗಿ ಕೇಂದ್ರ ಸರ್ಕಾರದಿಂದ ನೇರವಾಗಿ 17 $^{1}/_{2}$ ಕೋಟಿ ರೂಪಾಯಿ ಅಸೈಡ್ ಸ್ಕೀಮ್‌ನಲ್ಲಿ ಬಂದಿರುವಂಥ ಹಣವನ್ನು ನಮಗೆ ಒದಗಿಸುವಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಬಂದರು ಮಂಡಳಿ ವಿಶಾಖಪಟ್ಟಣದಲ್ಲಿ 2 ಪರ್ಸೆಂಟ್ ಸೆಸ್‌ನ್ನು ಡೆವಲಪ್‌ಮೆಂಟ್‌ಗೋಸ್ಕರ ಕೊಡುತ್ತಾ ಇದ್ದಾರೆ. ನಮ್ಮ ಕರ್ನಾಟಕ Port Trust ನಿಂದ ಒಂದು ನಯಾಪೈಸೆ ನಮಗೆ ಸಿಗುತ್ತಾ ಇಲ್ಲ. ಈ ದೃಷ್ಟಿಯಿಂದ ಕನಿಷ್ಟ ಅವರ ಕಡೆಯಿಂದ ಎರಡು ಪರ್ಸೆಂಟಾದರೂ ಡೆವಲಪ್‌ಮೆಂಟ್ ಸೆಸ್ ವಸೂಲಿ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ತಾವು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಯೋಗೀಶ್ ಭಟ್‌ರವರು ಒಂದು ಸಲಹೆಯನ್ನು ಕೊಟ್ಟಿದ್ದರು. ಡೆವಲಪ್‌ಮೆಂಟ್‌ಗಾಗಿ ಒಂದು ಹೊಸ ತೆರಿಗೆಯನ್ನು ಏಕೆ ಹಾಕಬಾರದು ಎಂದು ಹೇಳಿದ್ದಾರೆ. ನಾನು, ನಮ್ಮ ಕಾರ್ಯದರ್ಶಿಯವರಿಗೆ ಸಲಹೆ ಮಾಡುತ್ತೇನೆ. ಅದರ ಬಗ್ಗೆ ವಿಚಾರ ಮಾಡಿ, ನಾನು ತಿಳಿಸುತ್ತೇನೆ. ಇದೇ ಸಮಯದಲ್ಲಿ ಅವರು ಏನು ಹೇಳುತ್ತಿದ್ದಾರೆ. ಅಸೈಡ್ ಸ್ಕೀಮ್‌ನಲ್ಲಿ, ಒಂದು ಪರ್ಟಿಕ್ಯುಲರ್ ಸ್ಕೀಮ್‌ಗೆ ಹದಿನೇಳುವರೆ ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿಸಿಕೊಂಡು, ಇದನ್ನು ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕಂಥಾದ್ದು ನಿಜ. ಅದನ್ನು ಸಂಪೂರ್ಣವಾಗಿ ನಾವು ಬಿಡುಗಡೆ ಮಾಡದೇ ಇರತಕ್ಕಂಥಾದ್ದು ನಿಜ. ಈ ಅಧಿವೇಶನ ಮುಗಿದ ಮೇಲೆ ಆ ಪರ್ಟಿಕ್ಯುಲರ್ ಪ್ರಾಜೆಕ್ಟ್‌ನ್ನು ನಾನು, ಪ್ರಿನ್ಸಿಪಲ್ ಸೆಕ್ರೆಟರಿ, ಚೀಫ್ ಸೆಕ್ರಟರಿಯವರು ಮತ್ತು ಇಂಪ್ಲಿಮೆಂಟಿಂಗ್ ಏಜೆನ್ಸಿಯನ್ನೂ ಕರೆದು ಬಿಡುಗಡೆ ಮಾಡದೇ ಇರುವುದಕ್ಕೆ ಕಾರಣ ಏನು? ಇಲ್ಲಿ ಲೋಕಲ್ ಕಾಂಟ್ರಿಬ್ಯೂಷನ್ ಕೂಡ ಬೇಕಾಗುತ್ತದೆ. ಲೋಕಲ್ ಕಾಂಟ್ರಿಬ್ಯೂಷನ್ ಇದಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. If it is 100% grant, the money has come, if it is for a particular purpose and if the purpose is the useful purpose, I will definitely release the money.

ಶ್ರೀ ಎನ್. ಯೋಗೀಶ್ ಭಟ್: ಇದಕ್ಕೆ ಸಂಬಂಧಪಟ್ಟಂತೆ ಸ್ಪೆಷಲ್ ಇಕಾನಾಮಿಕ್ ಜೋನ್ 25 ಸಾವಿರ ಕೋಟಿ ರೂ ಯಾವುದು ಇನ್‌ವೆಸ್ಟ್‌ಮೆಂಟ್ ಬರುತ್ತಾ ಇದೆ, ಯಾವುದೇ ಕಾರಣಕ್ಕೆ ಇದು ಹಿಂದೆ ಹೋಗದ ರೀತಿಯಲ್ಲಿ, ಅದು ಪೂರ್ತಿ ನಮಗೆ ವಿನಿಯೋಗವಾಗುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಓಟೀಸ್ ಸಿಸ್ಟಂನಲ್ಲಿ ತಾವೇನು ಕೊಟ್ಟಿದ್ದೀರಿ, ದಯವಿಟ್ಟು ಇದರಲ್ಲಿ ಮಾನವೀಯ ನೆಲೆಯಲ್ಲಿ ಪರಿಹಾರ ಮಾಡುವಂಥ ಕಾರ್ಯ ಮಾಡಬೇಕು. ಇಂಡಸ್ಟ್ರಿಯಲ್‌ಗೆ ಸಂಬಂಧಿಸಿದಂತೆ ಒನ್ ಟೈಮ್ ಸೆಟಲ್‌ಮೆಂಟ್ ಎಂದು ಬರುತ್ತೆ. ಇದನ್ನು ಮಾನವೀಯ ನೆಲೆಯಲ್ಲಿ ಅದನ್ನು ಸೆಟಲ್‌ಮೆಂಟ್ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ತಾವು ಅಂಕಿಅಂಶ ಕೊಟ್ಟಿದ್ದೀರಿ. ನಾನೇ ತಮಗೆ ರೆಫರೆನ್ಸ್ ಮಾಡುವಂಥ ಕೇಂದ್ರ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಸೋಸಿಯೇಷನ್‌ನಿಂದ ಬಂದದ್ದು. ಅದು ಇನ್ನೂ ಸೆಟಲ್ ಆಗಿಲ್ಲ. ದಯವಿಟ್ಟು, ಕಾನೂನು ಚೌಕಟ್ಟಿನಲ್ಲಿ ಸ್ವಲ್ಪ ಲಿಬರ್‌ಲೈಸ್ ಮಾಡಿ ಮಾನವೀಯ ನೆಲೆಯಲ್ಲಿ ಇದನ್ನು ಸೆಟಲ್‌ಮೆಂಟ್ ಮಾಡಬೇಕು ಮತ್ತು ಎನ್.ಜಿ.ಸಿ.ಒ ಬಗ್ಗೆ ತಾವು ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅಸೈಡ್ಸ್ ಸ್ಕೀಮ್ ಬಗ್ಗೆ ನನ್ನ ಹತ್ತಿರ ಮಾಹಿತಿ ಇರಲಿಲ್ಲ, ಈಗ ನಮ್ಮ ಕಾರ್ಯದರ್ಶಿಗಳು ಕಳುಹಿಸಿಕೊಟ್ಟಿದ್ದಾರೆ. ನಾವು 5 ಕೋಟಿ ರೂಪಾಯಿ ರೋಡಿಗೆ ಕೊಡುತ್ತೇವೆಂದು ಹೇಳಿದ್ದು. 4 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಇನ್ನೂ ಒಂದು ಕೋಟಿ ರೂಪಾಯಿಯನ್ನು ನಾವು ತತ್‌ಕ್ಷಣ ರಿಲೀಸ್ ಮಾಡುತ್ತೇವೆ. ಈ ಒ.ಟಿ.ಎಸ್. ಸ್ಕೀಮ್ ಮಾಡಿರತಕ್ಕಂಥಾದ್ದೇ ಸಿಕ್ ಇಂಡಸ್ಟ್ರೀಗಳನ್ನು ಮತ್ತೆ ಏನಾದರೂ ಮಾಡಿ ರಿವೈಜ್ ಮಾಡಬೇಕೆಂದು ಕೆ.ಎಸ್.ಎಫ್.ಸಿ. ಫೈನಾನ್ಸ್ ಡಿಪಾರ್ಟ್‌ಮೆಂಟ್ ಕೆಳಗಡೆ ಬರುತ್ತದೆ. ಅವರೊಂದು ಒ.ಟಿ.ಎಸ್. ಸ್ಕೀಮ್ ಮಾಡಿದ್ದಾರೆ. ಕೆ.ಎಸ್.ಎಸ್.ಐ.ಡಿ.ಸಿ. ಯವರು ಇದು ನನ್ನ ಇಲಾಖೆಯ ವ್ಯಾಪ್ತಿಯೊಳಗಡೆಯೇ ಬರುತ್ತದೆ. ಅವರೂ ಒಂದು ಒ.ಟಿ.ಎಸ್. ಸ್ಕೀಮನ್ನು ಮಾಡಿದ್ದಾರೆ. ಕೆ.ಎಸ್.ಎಸ್.ಐ.ಡಿ.ಸಿಯವರು ಒಂದು ಒ.ಟಿ.ಎಸ್ ಸ್ಕೀಮನ್ನು ಮಾಡಿದ್ದಾರೆ ಇದು ಅಲ್ಲದೇ ಟೈಮ್ ಲ್ಯಾಪ್ಸ್ ಆಗಿದೆ ಇನ್ನೂ ಒಂದಷ್ಟು ದಿನ ಟೈಮನ್ನು ಕೊಡಿಸೋಣ ಕೆ.ಎಸ್.ಎಸ್.ಐಡಿ.ಸಿ.ದು ಟೈಮ್ ಲ್ಯಾಪ್ಸ್ ಆಗಿದೆ ಅಂತ ಕಾಣುತ್ತದೆ, ಮತ್ತೆ ಡಿಸ್ಟ್ರಿಕ್ಟ್ ವೈಸ್ ಕೆ.ಎಸ್.ಎಫ್.ಸಿ. ಡೀಟೇಲ್ಸ್ ಇದೆ, ಆ ಡಿಟೇಲ್ಸ್‌ನ್ನು ನಾನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಆಗುವುದಿಲ್ಲ. ಏಕೆಂದರೆ ಅದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ಅದೇ ಒಂದು ದೊಡ್ಡ ಇದು ಆಗುತ್ತದೆ. ಮಾನ್ಯ ಅಧ್ಯಕ್ಷರೇ, ಇನ್ನೊಂದು ಮಹತ್ವದ ವಿಚಾರವನ್ನು ಮಾನ್ಯ ಯೋಗೀಶ್ ಭಟ್‌ರವರು ಕೇಳಿದ್ದಾರೆ. ಅದು ಏನೆಂದರೆ ಈ ಒ.ಎನ್.ಜಿ.ಸಿ.ಗೆ ಸಂಬಂಧಪಟ್ಟಿದ್ದು ಪಾಪ ಮಾನ್ಯ ಯೋಗೀಶ್ ಭಟ್‌ರವರು ಈ ಒ.ಎನ್.ಜಿ.ಸಿ. ಬಗ್ಗೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದಾರೆ. ಈ ಸದನಕ್ಕೆ ಅದು ಅನ್‌ಸ್ಟಾರ್ಡ್ ಆಗಿದೆ. ನಾನು ನೋಡಿದೆ ಉತ್ತರ ಕೊಟ್ಟಿದ್ದೇನೆ ಅದಕ್ಕೆ, ಡೀಟೇಲ್ಡ್ ಲಿಸ್ಟ್ ಇದೆ. ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಕರ್ನಾಟಕ ಸರ್ಕಾರ ಮತ್ತು ಒ.ಎನ್.ಜಿ.ಸಿ. ಮಧ್ಯೆ ಆಗಿರತಕ್ಕಂಥ ಒ.ಎನ್.ಜಿ.ಸಿ. ಯವರು 25 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಹೂಡತಕ್ಕಂಥ ಒಪ್ಪಂದವನ್ನು

ಮಾಡಿಕೊಂಡಿದ್ದಾರೆ, ಆ ಒಪ್ಪಂದದ ಪ್ರಕಾರವೇ ರಾಜ್ಯ ಸರ್ಕಾರ ಕೊನೆ ಗಳಿಗೆಯವರಿಗೂ ಸಹ ಪ್ರಯತ್ನವನ್ನು ಮಾಡುತ್ತದೆ. ಯಾವುದೇ ಕಾರಣಕ್ಕೂ ನಾವು ಹಿಂದೆ ಸರಿಯುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿದ್ಯಾರ್ಥಿನಿಲಯಗಳ ಸುಧಾರಣೆ

109 (1238) Sri C.T. Ravi (ಚಿಕ್ಕಮಗಳೂರು) Will the Minister for Social Welfare be pleased to state:-

a) What is the number of free hostels schemes for students of scheduled castes and backward classes and which are there;

b) How many schemes have been implemented in Chikkamagalur District. In which places of the district it is proposed to start new hostels ;

c) What is the amount released for this ;

d) To which department the implementation of all this schemes has been entrusted ;

e) Furnish the scheme wise details ?

Dr. Y. Nagappa Minister for Social Welfare :

a) Details of free hostels schemes in respect of Backward classes and scheduled castes students are indicated below.

		Number of Hostels
I.	Backward Classes Department	
	1. Goverment pre-Matric hostels	1171
	2. Government post-Matric hostels	261
	3. Grant-in-aid Pre-Matric hostels	251
	4. Grant-in-aid Post-Matric hostels	11
	5. Residential schools	22
	6. Ashram Schools	78
II.	SocialWelfare Department	
	1. Government pre-Matric hostels	1154
	2. Grant-in-aid Pre-Matric hostels	276
	3. Government post-Matric hostels	281
	4. Recognised private - College hostels run by voluntary Organisation.	87
	5. Residential schools	90